ನಗರದಲ್ಲಿ ನಡೆದ 2 ದಿನಗಳ ಸಮಾಜಮುಖಿ ಸಾಹಿತ್ಯ ಸಮ್ಮೇಳನ ಸಂಪನ್ನ

ಬಿಕ್ಕಟ್ಟಲ್ಲಿ ಪ್ರಜಾಪ್ರಭುತ್ವ: ಬಿ.ಎಲ್.ಶಂಕರ್

ಸಂ.ಕ. ಸಮಾಚಾರ, ಬೆಂಗಳೂರು

ಕೊಂಡಜ್ಜಿ ಬಸಪ್ಪ ಸಭಾಂಗಣದಲ್ಲಿ 2 ದಿನ ನಡೆದ ಸಮಾಜಮುಖಿ ಸಾಹಿತ್ಯ ಸಮ್ಮೇಳನ ಸಂಪನ್ನಗೊಂಡಿತು. ಎರಡೂ ದಿನ ಪ್ರಮುಖರ ಭಾಷಣ, ವಿವಿಧ ಗೋಷ್ಠಿಗಳು ನಡೆದವು.

ಭಾನುವಾರ ಬೆಳಗ್ಗೆ ನಡೆದ ಬಿಕ್ಕಟ್ಟಿನಲ್ಲಿ ಗಣತಂತ್ರ ಮತ್ತು ಪ್ರಜಾಪ್ರಭುತ್ವ ಗೋಷ್ಠಿಯಲ್ಲಿ ಮಾಜಿ ಸಭಾಪತಿ ಬಿ.ಎಲ್. ಶಂಕರ್ ಮಾತನಾಡಿ, ಭಾರತದ ಪ್ರಜಾಪ್ರಭುತ್ವ ಅನೇಕ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ದೇಶದ ಜನತಂತ್ರ ಕೇವಲ ಶಾಸಕರು, ಸಂಸದರ ಸುತ್ತ ಸುತ್ತುತ್ತಿದೆ. ಆದರೆ ಗ್ರಾಮ ಪಂಚಾಯಿತಿ ಮತ್ತು ಜಿಬಿಎ ಚುನಾವಣೆಗಳು ನಡೆದಿಲ್ಲ. ಈ ಬಗ್ಗೆ ಯಾವ ಪಕ್ಷವು ಹೋರಾಟ ಮಾಡುತ್ತಿಲ್ಲ. ಇದು ಕೂಡ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಪ್ರಮುಖ ಬಿಕ್ಕಟ್ಟು ಎಂದರು. ಅಂಕಣಕಾರ ಎ.ನಾರಾಯಣ ಮಾತನಾಡಿದರು.

ಗೋಷ್ಠಿ ಮಧ್ಯೆ ವಾಗ್ವಾದ:

ಇತ್ತೀಚಿನ ದಿನಗಳಲ್ಲಿ ಲೋಕಸಭೆ, ರಾಜ್ಯಸಭೆ ಸೇರಿ ವಿಧಾನಸಭೆಯಲ್ಲಿ ಯಾವುದೇ ಚರ್ಚೆಗೆ ಅವಕಾಶವಿಲ್ಲದಂತಾಗಿದ್ದು, ವಿಪಕ್ಷಗಳು ಬರಿ ಗಲಾಟೆ ಗದ್ದಲ ಮಾಡುತ್ತಿವೆ ಎಂಬ ಬಿಜೆಪಿ ವಕ್ತಾರ ಪ್ರಕಾಶ್ ಶೇಷರಾಘವಾಚಾರ್ ಹೇಳಿಕೆಗೆ ಸಭಿಕರೊಬ್ಬರು ಆಕ್ಷೇಪ ವ್ಯಕ್ತಪಡಿಸಿದ್ದು, ಆರ್‌ಎಸ್‌ಎಸ್ ಕುರಿತ ಚರ್ಚೆ ಎಳೆದು ತಂದರು. ಆರ್‌ಎಸ್‌ಎಸ್ ಒಂದು ಸಾಂಸ್ಕೃತಿಕ ಸಂಘಟನೆ ಎಂದು ನೀವು ಹೇಳಿಕೊಳ್ಳುತ್ತೀರಿ. ಆದರೆ ವಾಸ್ತವದಲ್ಲಿ ಅದು ಹಿಂದೂ ಸಂಘಟನೆ. ಅದನ್ನು ಮತ್ತು ಬಿಜೆಪಿಯನ್ನು ರಾಜಕೀಯ ಅಂಗ ಎಂಬುವುದನ್ನು ಘಂಟಾಘೋಷವಾಗಿ ಹೇಳಬೇಡಿ. ಪ್ರಕಾಶ ಅವರು, ಆರ್‌ಎಸ್‌ಎಸ್‌ಗೂ ಬಿಜೆಪಿಗೂ ಸಂಬಂಧವಿಲ್ಲ.

ಆದರೆ ಇದನ್ನು ಒಪ್ಪದ ಸಭಿಕರು ಮತ್ತೆ ಪ್ರಧಾನಿ ಮತ್ತು ಬಿಜೆಪಿ ಶಾಸಕರು ಆರ್‌ಎಸ್‌ಎಸ್ ಶಾಖೆ ಕಾರ್ಯಕ್ರಮಗಳಿಗೆ ಹೋಗುವುದು ಏಕೆ? ಅಲ್ಲಿಗೆ ಗೋಷ್ಠಿಯನ್ನು ಬರಖಾಸ್ತು ಮಾಡಲಾಯಿತು. ಮುಖ್ಯ ವೇದಿಕೆಯ ಹೊರಗೂ ಪ್ರಕಾಶ್, ಆಯಿಷಾ ಫರ್ಝಾನಾ ಮತ್ತು ಬಿ.ಎಲ್ ಶಂಕರ್ ಅವರನ್ನು ತಡೆಗಟ್ಟಿದ ಕೆಲ ಸಭಿಕರು, ಹಲವಾರು ಪ್ರಶ್ನೆಗಳಿಗೆ ಉತ್ತರಿಸುವಂತೆ ಪಟ್ಟು ಹಿಡಿದರು. ಅಲ್ಲಿಗೆ ಬಂದ ಪೊಲೀಸರು, ಎಲ್ಲರನ್ನೂ ಆವರಣದಿಂದ ಹೊರಗೆ ಕಳುಹಿಸಿದರು.

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಮಾತನಾಡಿ, ಹಿರಿಯ ಸಾಹಿತಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜನಮುಖಿ, ಸಮಾಜಮುಖಿ ದೃಷ್ಟಿಕೋನವನ್ನು ಇಟ್ಟುಕೊಂಡು ಕಟ್ಟಿ ಬೆಳೆಸಿರುವ ಕನ್ನಡ ಸಾಹಿತ್ಯ ಪರಿಷತ್ತಿನೊಳಗೆ ಯಾವುದೇ ರಾಜಕೀಯ ಪಕ್ಷಗಳು ತಮ್ಮ ಕೊಳಕು ಮೂಗನ್ನು ತೂರಿಸಬೇಡಿ ಎಂದರು.

ಕನಕದಾಸರ ತತ್ವಾದರ್ಶ ಎಲ್ಲರಿಗೂ ಮಾರ್ಗದರ್ಶಕ: ರುದ್ರೇಶಮೂರ್ತಿ

ಸಂ.ಕ.ಸಮಾಚಾರ, ವಿಜಯಪುರ

ದಾಸಶ್ರೇಷ್ಠ ಕನಕದಾಸರ ತತ್ವಾದರ್ಶ ಎಲ್ಲರಿಗೂ ಮಾರ್ಗದರ್ಶನವಾಗಿದೆ ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್.ರುದ್ರೇಶ ಮೂರ್ತಿ ತಿಳಿಸಿದರು.

ವಿಜಯಪುರ ಪಟ್ಟಣದ ಕೆರೆಕೋಡಿ ರಸ್ತೆಯ ಕಾವೇರಪ್ಪನವರ ಕೆ.ಮುನಿರಾಜು ಅವರ ನಿವಾಸದಲ್ಲಿ ಅಖಿಲ ಕರ್ನಾಟಕ ಮಿತ್ರಸಂಘದ ವತಿಯಿಂದ ಹಮ್ಮಿಕೊಂಡಿದ್ದ ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕನಕದಾಸರ ಅನನ್ಯಭಕ್ತಿ, ಅನುಪಮವಾದ ಜ್ಞಾನ, ಆತ್ಮಸಾಕ್ಷಾತ್ಕಾರದ ಸ್ವರೂಪ ಎಲ್ಲರನ್ನೂ ಬೆರಗುಗೊಳಿಸುವಂತಿದ್ದು, ಕುಲ–ಜಾತಿಯೆಂಬ ಸಾಮಾಜಿಕ ಕಟ್ಟಳೆಯಲ್ಲಿ ಮೇಲು–ಕೀಳೆಂಬ ಭಾವನೆಯಿಂದ ಉಂಟಾದ ಅಸಮಾನತೆಯನ್ನು ಕನಕದಾಸರು ತೀಕ್ಷಣವಾಗಿ ವಿರೋಧಿಸಿದ್ದಾರೆಂದರು. ಪ್ರತಿಯೊಂದು ಕೀರ್ತನೆಯೂ ಭಿನ್ನ ಅನುಭವವನ್ನು ನೀಡುವುದಲ್ಲದೇ ಕರ್ನಾಟಕ ಶಾಸ್ತ್ರೀಯ ಸಂಗೀತದ ಅನನ್ಯ ರಚನೆಗಳಾಗಿ ಜನಸಾಮಾನ್ಯರ ಭಾಷೆಯಲ್ಲಿ ರಚಿತಗೊಂಡಿವೆ. ಕನಕದಾಸರು ಮಧ್ವರ ದ್ವೈತಸಿದ್ಧಾಂತವನ್ನು ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಹರಡಲು ಕಾರಣಕರ್ತರಾದರು ಎಂದರು.

ಜಿಲ್ಲಾ ಶರಣಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಚಂದ್ರಶೇಖರ ಹಡಪದ್ ಮಾತನಾಡಿ, ಸಾಮಾಜಿಕವಾಗಿ ಕೆಳವರ್ಗದಿಂದ ಬಂದು ದಾಸ ದೀಕ್ಷೆ ಪಡೆದು ಉತ್ತಮ ಕೃತಿಗಳನ್ನು ರಚಿಸಿ ದಾಸ ಸಾಹಿತ್ಯ, ಕರ್ನಾಟಕ ಸಾಹಿತ್ಯ ಮತ್ತು ಸಂಗೀತ ಲೋಕಕ್ಕೆ ಹೊಸ ಆಯಾಮವನ್ನು ಸೃಷ್ಟಿಸಿದವರು ಕನಕದಾಸರು ಎಂದು ತಿಳಿಸಿದರು. ಅಖಿಲ ಕರ್ನಾಟಕ ಮಿತ್ರ ಸಂಘದ ಅಧ್ಯಕ್ಷ ಚಿ.ಮಾ.ಸುಧಾಕರ್, ಆರ್.ಮುನಿರಾಜು, ಕೆ.ಮುರಳಿ, ಕಲಾವಿದ ಆರ್.ಚನ್ನಕೃಷ್ಣ, ಪತ್ರಕರ್ತ ಕೆ.ಮುನಿರಾಜು, ರಂಗನಿರ್ದೇಶಕ ಎಂ.ವಿ.ನಾಯ್ಡು, ನರಸಿಂಹಪ್ಪ ಮತ್ತಿತರರಿದ್ದರು. ಜೆ.ಎಸ್. ನಾಗರಾಜು ಮತ್ತಿತರರಿದ್ದರು.

ಕನ್ನಡೇತರಿಗೆ ಕನ್ನಡ ಭಾಷೆ ಕಲಿಸೋಣ: ಚಂದ್ರಶೇಖರ್

ಸಂ.ಕ.ಸಮಾಚಾರ, ವಿಜಯಪುರ

ಕನ್ನಡೇತರಿಗೆ ಕನ್ನಡ ಭಾಷೆಯನ್ನು ಕಲಿಸೋಣ ಎಂದು ಶರಣ ಸಾಹಿತ್ಯ ಪರಿಷತ್ತಿನ ಚಂದ್ರಶೇಖರ್ ಹಡಪದ್ ತಿಳಿಸಿದರು.

ವಿಜಯಪುರ ಪಟ್ಟಣದ 11 ವಾರ್ಡ್‌ನಲ್ಲಿ ಅರ್ಜುನ್ ತಂಡ ವತಿಯಿಂದ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಕನ್ನಡ ಭಾಷೆ ಶ್ರೀಮಂತ ಭಾಷೆಯಾಗಿದೆ. ಕನ್ನಡ ನಾಡಿನ ಜವಾಬ್ದಾರಿಯುತ ವ್ಯಕ್ತಿಗಳಾದ ನಾವು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಮುಂದಾಗಬೇಕೆಂದರು.

ವಿಜಯಪುರ ಪುರಸಭೆ ಸದಸ್ಯ ಕೇಶವಪ್ಪ ಮಾತನಾಡಿ, ಕನ್ನಡ ಭಾಷೆ ಉಳಿಯಬೇಕಾದರೆ ಹಳ್ಳಿಗಾಡಿನಿಂದ ಮಾತ್ರ ಸಾಧ್ಯ. ಕನ್ನಡಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳು ಬಂದಿವೆ. ಕನ್ನಡ ಭಾಷೆ ಉಳಿಸಿ ಬೆಳೆಸಲು ಇಂದು ಹೋರಾಟ ಮಾಡಬೇಕಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಆಂಗ್ಲಭಾಷೆಯ ವ್ಯಾಮೋಹದಿಂದಾಗಿ ಅನೇಕ ಕನ್ನಡ ಶಾಲೆಗಳು ಮುಚ್ಚುವಂತಾಗಿದೆ. ಉದ್ಯೋಗಕ್ಕಾಗಿ ಅನ್ಯ ಭಾಷೆ ಕಲಿತರೂ ಸಹ ಕನ್ನಡ ಭಾಷೆಯನ್ನು ಮರೆಯಬಾರದು ಹಾಗೂ ಅನ್ಯಭಾಷಿಕರಿಗೆ ಕನ್ನಡ ಕಲಿಸುವ ಕೆಲಸವಾಗಬೇಕೆಂದರು. ಎಸ್.ಆರ್.ಬಸವರಾಜು, ಅನಂತಕುಮಾರ್, ಚನ್ನಕೃಷ್ಣ, ರಾಮಚಂದ್ರ, ಮಂಜುನಾಥ, ಪುರಸಭಾ ಸದಸ್ಯರಾದ ಶ್ರೀರಾಮಪ್ಪ, ರಮೇಶ್, ಕರವೇ ಶಿವಕುಮಾರ್, ಅರ್ಜುನ, ಬಾಯ್ಸ್ ತಂಡದವರಾದ ಮುರುಳಿ, ಕೆಇಬಿ ಹರೀಶ್, ಮುನಿರಾಜು, ಮುರುಳಿ, ಅರುಣ, ಪುನೀತ್ ಮತ್ತಿತರರಿದ್ದರು.

ಆನೇಕಲ್ ಬಿಜೆಪಿ ಕಾರ್ಯದರ್ಶಿಯಾಗಿ ಮುರಳಿಕೃಷ್ಣ ಆಯ್ಕೆ

ಸಂ.ಕ.ಸಮಾಚಾರ ದೊಮ್ಮಸಂದ್ರ

ಆನೇಕಲ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಪ್ರಧಾನ

ಕಾರ್ಯದರ್ಶಿಯಾಗಿ ಮುಗಳೂರು ಗ್ರಾಪಂ ವ್ಯಾಪ್ತಿಯ ಮಹಲ್ ಚೌಡೇನಹಳ್ಳಿ ಗ್ರಾಮದ ವಿ. ಮುರಳಿಕೃಷ್ಣ ಆಯ್ಕೆಯಾಗಿದ್ದಾರೆ.

ಆನೇಕಲ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಆರ್.ಅಶೋಕ್‌ರೆಡ್ಡಿ ಅವರು ವಿ.ಮುರಳಿಕೃಷ್ಣ ಅವರಿಗೆ ನೇಮಕಾತಿ ಪತ್ರ ಹಸ್ತಾಂತರಿಸಿ ಅಭಿನಂದಿಸಿದರು. ಮುರಳಿಕೃಷ್ಣ ಅವರು ಈ ಹಿಂದೆ ಆನೇಕಲ್ ತಾಪಂ ಅಧ್ಯಕ್ಷರಾಗಿಯೂ, ಸರ್ಜಾಪುರದ ರೇಷ್ಮೆ ಬೆಳೆಗಾರರ ಮತ್ತು ರೈತರ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ನೂತನ ಬಿಜೆಪಿ ಪ್ರಧಾನ ಕಾರ್ಯದರ್ಶಿ ವಿ.ಮುರಳಿಕೃಷ್ಣ ಮಾತನಾಡಿ, ನನಗೆ ನೀಡಲಾದ ಜವಾಬ್ದಾರಿಯನ್ನು ನಿಷ್ಠೆಯಿಂದ ನಿರ್ವಹಿಸಿ, ಆನೇಕಲ್ ಕ್ಷೇತ್ರದ ಪ್ರತಿಯೊಂದು ಗ್ರಾಮಮಟ್ಟದಲ್ಲೂ ಪಕ್ಷದ ಸಂಘಟನೆ ಬಲಗೊಳ್ಳುವಂತೆ ಕಾರ್ಯನಿರ್ವಹಿಸುವೆ. ಪಕ್ಷದ ಹಿತಾಸಕ್ತಿಗೆ ಮೀರಿ ಕೆಲಸ ಮಾಡುವ ಎಲ್ಲಾ ಕಾರ್ಯಕರ್ತರೊಂದಿಗೆ ಕೈಜೋಡಿಸಿ ಮುಂದಿನ ಸ್ಥಳೀಯ ಸಂಸ್ಥೆ ಹಾಗೂ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ ಗೆಲ್ಲಿಸಲು ಶ್ರಮಪಡುತ್ತೇನೆ ಎಂದು ಭರವಸೆ ನೀಡಿದರು.

ತಿರುಮಲ ಪಾದಯಾತ್ರಿಗಳಿಗೆ ಉಪಾಹಾರ ಸೇವೆ: ಸತೀಶ್

ಸಂ.ಕ.ಸಮಾಚಾರ, ಹೊಸಕೋಟೆ

500 ತಿರುಮಲ ಪಾದಯಾತ್ರಿಗಳಿಗೆ ಬೆಳಗಿನ ಉಪಾಹಾರ ವ್ಯವಸ್ಥೆ ಮಾಡಲಾಗಿತ್ತು ಎಂದು ಪಾದಯಾತ್ರೆ ಸಮಿತಿಯ ಮುಖ್ಯಸ್ಥ ಸತೀಶ್ ತಿಳಿಸಿದರು.

ಹೊಸಕೋಟೆ ನಗರದ ಹೊರವಲಯದ ರಾಷ್ಟ್ರೀಯ ಹೆದ್ದಾರಿ 75 ಸುಲ್ತಾನ್ ಪ್ಯಾಲೆಸ್ ಬಳಿಯಿರುವ ಸೈಯದ್ ಪ್ಯಾಲೆಸ್‌ನಲ್ಲಿ 49ನೇ ವರ್ಷದ ತಿರುಪತಿ ತಿರುಮಲ ಪಾದಯಾತ್ರಿಗಳಿಗೆ ಪ್ರಸಾದ, ಹಣ್ಣುಹಂಪಲು ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಳಗಿನ ಉಪಾಹಾರದಲ್ಲಿ ನಾಲ್ಕು ಬಗೆಯ ತಿಂಡಿ, ಸೇಬು, ಸೀಬೆ ಹಣ್ಣು, ಅವಲಕ್ಕಿ, ಬಿಸ್ಕತ್ತು, ನೀರಿನ ಬಾಟಲಿಯನ್ನು ವಿತರಿಸಿ ಹಾಗೂ ಅವರು ವಿಶ್ರಾಂತಿ ಪಡೆಯಲು ವ್ಯವಸ್ಥೆಯನ್ನು ಸಹ ಮಾಡಲಾಗಿತ್ತು. ಈ ಸೇವೆಯಲ್ಲಿ ಕಳೆದ 25 ವರ್ಷಗಳಿಂದ ನಡೆಸಿಕೊಂಡು ಬರಲಾಗುತ್ತಿದೆ ಎಂದರು.

ತಿರುಮಲ ಪಾದಯಾತ್ರಿಗಳ ಸೇವಾ ಟ್ರಸ್ಟ್‌ನ ಮಾಜಿ ಅಧ್ಯಕ್ಷ ಡಾ.ಸಿ.ಜಯರಾಜ್ ಮಾತನಾಡಿದರು. ಸಿ.ಮಂಜುನಾಥ್, ಆಂಜಿನಪ್ಪ ಮತ್ತು ಕುಟುಂಬದವರು, ಉಮೇಶ್, ಕಬಾಬ್ ರವಿ, ನಾಗರಾಜ್, ಬಿ ಮುನಿಯಪ್ಪ, ದಾಸರಹಳ್ಳಿ ಮಂಜು, ಕುಂಬಳಹಳ್ಳಿ ಮಂಜು, ಎಸ್.ರವಿ ಮತ್ತಿತರರಿದ್ದರು.

ವಿದ್ಯಾರ್ಥಿಗಳಿಂದ ವಂದೇ ಮಾತರಂ

ಸಂ.ಕ.ಸಮಾಚಾರ, ರಾಮನಗರ

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ನಡೆದ ಹೋರಾಟದಲ್ಲಿ 'ವಂದೇ ಮಾತರಂ' ಗೀತೆ ಅನುರಣಿಸುತ್ತಿತ್ತು ಎಂದು ಸಂಘದ ಅಧ್ಯಕ್ಷ ಸಿ.ಎಂ.ಲಿಂಗಪ್ಪ ತಿಳಿಸಿದರು.

ಬಿಡದಿಯ ಜ್ಞಾನ ವಿಕಾಸ್ ವಿದ್ಯಾಸಂಘದ ಜೆವಿಐಟಿ ಕಾಲೇಜು ಆವರಣದಲ್ಲಿ 150 ವಿದ್ಯಾರ್ಥಿಗಳು ಸಾಮೂಹಿಕವಾಗಿ ಗಾಯನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಆ ಮೂಲಕ ದೇಶದ ಜನರು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ದೇಶಭಕ್ತಿಯ ಹುರುಪು ತುಂಬುತ್ತಿತ್ತು. ವಿದ್ಯಾರ್ಥಿಗಳು ಗೀತೆಯ ಮಹತ್ವವನ್ನು ಅರಿಯಬೇಕೆಂದರು.

'ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷರು ಮಾಡುತ್ತಿದ್ದ ದೌರ್ಜನ್ಯದ ವಿರುದ್ಧ ವಂದೇ ಮಾತರಂ ಕ್ರಾಂತಿಗೀತೆ ಮೊಳಗುತ್ತಿತ್ತು. ದೇಶಭಕ್ತಿಯ ಚಿಲುಮೆಯಂತಿದ್ದ ಬಂಕಿಮಚಂದ್ರ ಚಟರ್ಜಿ ಅವರು ರಚಿಸಿದ ಈ ಗೀತೆಯು, ದೇಶದ ಜನರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ' ಎಂದು ಹೇಳಿದರು.

ಸ್ವಾತಂತ್ರ್ಯ ಹೋರಾಟದ ಕಿಚ್ಚು ಹತ್ತಿಸಿದ ಕವಿ ಬಂಕಿಮಚಂದ್ರ ಚಟರ್ಜಿ ರಚಿತ 'ವಂದೇ ಮಾತರಂ' ಗೀತೆಗೆ 150 ವರ್ಷ ತುಂಬಿದ ಹಿನ್ನೆಲೆಯಲ್ಲಿ 150 ವಿದ್ಯಾರ್ಥಿಗಳು ಸಾಮೂಹಿಕವಾಗಿ ಗೀತೆಯನ್ನು ಹಾಡುವ ಮೂಲಕ ಸಂಭ್ರಮಾಚರಿಸಿದರು. 150 ಕಂಠಗಳಲ್ಲಿ ಏಕಕಾಲದಲ್ಲಿ ಮೂಡಿಬಂದ ಗೀತೆಯು ಎಲ್ಲೆಡೆ ಮಾರ್ದನಿಸಿತು. ಸಂಘದ ಖಜಾಂಚಿ ಬಿ.ಎನ್. ಗಂಗಾಧರಯ್ಯ, ಜೆವಿಐಟಿ ಪ್ರಾಂಶುಪಾಲ ಸೀತಾಗಿರೀಶ್, ಪಿಯು ಕಾಲೇಜಿನ ಪ್ರಾಂಶುಪಾಲ ಸರವಣನ್, ಕನ್ನಡ ಮಾಧ್ಯಮಿಕ ಶಾಲೆಯ ಜಯಂತಿ, ಪಾರ್ವತಿ, ಉಪನ್ಯಾಸಕರಾದ ಚಿಕ್ಕಪುಟ್ಟಯ್ಯ, ಶಿವರಾಮು, ಶರತ್, ಶಿಕ್ಷಕಿ ಮಂಜುಳ ಮತ್ತಿತರರಿದ್ದರು.

ಕೆಯುಡಬ್ಲ್ಯೂಜೆ: ಬೆಂ.ದಕ್ಷಿಣ ಘಟಕದ ಅಧ್ಯಕ್ಷ ಸ್ಥಾನಕ್ಕೆ ಶಿವಲಿಂಗಯ್ಯ ಆಯ್ಕೆ

ಸಂ.ಕ.ಸಮಾಚಾರ, ರಾಮನಗರ

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬೆಂ.ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷರಾಗಿ ಶಿವಲಿಂಗಯ್ಯ ವಿಭೂತಿಕೆರೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಮಂಜುನಾಥ ಎಸ್.ಆಯ್ಕೆಯಾಗಿದ್ದಾರೆ. ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಶಿವಮಾದಯ್ಯ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಭಾನುವಾರ ನಡೆದ ಚುನಾವಣೆಯಲ್ಲಿ 55 ಮತಗಳನ್ನು ಪಡೆದ ಶಿವಲಿಂಗಯ್ಯ ಅವರು ಎದುರಾಳಿ ಪಿ.ಎಸ್. ರಾಜು (ಪಾದ್ರಳ್ಳಿ) ಅವರನ್ನು 15 ಮತಗಳಿಂದ ಮಣಿಸಿದರು. ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಕಣಕ್ಕಿಳಿದು 40 ಮತಗಳನ್ನು ಪಡೆದ ಅಫ್ರೋಜ್ ಖಾನ್ ವಿರುದ್ಧ ಮಂಜುನಾಥ್ 57 ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದರು.

ಉಪಾಧ್ಯಕ್ಷರಾಗಿ ಚನ್ನಪಟ್ಟಣದ ಲಕ್ಷ್ಮೀಪತಿ, ರಾಮನಗರದ ಶಿವರಾಜು ಟಿ., ಕನಕಪುರದ ಶಿವಲಿಂಗಯ್ಯ ಶಿವನಹಳ್ಳಿ, ಕಾರ್ಯದರ್ಶಿಗಳಾಗಿ ಮಾಗಡಿಯ ಎಂ.ಎಸ್. ಸಿದ್ದಲಿಂಗೇಶ್ವರ, ಚನ್ನಪಟ್ಟಣದ ಕೇಶವಮೂರ್ತಿ, ರಾಮನಗರ ಎಂ.ಜಗದೀಶ್ ಗೆಲುವು ಸಾಧಿಸಿದರು.

ಕಾರ್ಯಕಾರಿಣಿ ಸಮಿತಿ ಸದಸ್ಯರು: ಎಚ್.ಎಂ.ರಮೇಶ್, ಬೋರಯ್ಯ ಜೆ.ಸಿ, ವೆಂಕಟೇಶ್‌ಗೌಡ (ಎ.ಒ.ವೆಂಕಟೇಶ್ ಪ್ರಭು), ಎಸ್.ವಿ.ಗಿರೀಶ್, ರವಿಕಿರಣ್ ವಿ., ಜಗದೀಶ್ ಎಸ್., ಎಸ್. ರುದ್ರೇಶ್ವರ, ರಮೇಶ್. ಆರ್., ಅನಿಲ್.ಎಸ್., ಡಿ.ಟಿ. ತಿಲಕ್‌ರಾಜ್, ಬಿ. ಮಹದೇವಯ್ಯ (ಬೆಂಕಿ), ಸೋಮಶೇಖರ್, ನರಸಿಂಗರಾವ್ ಕೆ., ಶ್ರೀಧರ್ ಎಸ್., ಗಜಫರ್ ಆಲಿ ಬೇಗ್ ಅವರು ಸಂಘದ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಗೆಲುವು ಸಾಧಿಸಿದ ಎಲ್ಲರಿಗೂ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್. ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ) ಅಭಿನಂದನೆ ಸಲ್ಲಿಸಿದರು.

ಕನ್ನಡ ಸಾಹಿತ್ಯ ಲೋಕಕ್ಕೆ ಕನಕರ ಕೊಡುಗೆ ಅಪಾರ: ಬೈರೆಡ್ಡಿ ಶ್ಲಾಘನೆ

ಸಂ.ಕ.ಸಮಾಚಾರ, ಹೊಸಕೋಟೆ

ಕನ್ನಡ ಸಾಹಿತ್ಯಲೋಕಕ್ಕೆ ಕನಕದಾಸರ ಕೊಡುಗೆ ಅಪಾರ ಎಂದು ವಿದ್ಯಾವನ ಕಾಲೇಜಿನ ಪ್ರಾಂಶುಪಾಲರಾದ ಬೈರೆಡ್ಡಿ ತಿಳಿಸಿದರು.

ತಾಲೂಕಿನ ಅನುಗೊಂಡನಹಳ್ಳಿ ಹೋಬಳಿಯ ತಿರುಮಲ ಶೆಟ್ಟಿಹಳ್ಳಿ ಕ್ರಾಸ್‌ನಲ್ಲಿರುವ ವಿದ್ಯಾವನ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕನ್ನಡ ರಾಜ್ಯೋತ್ಸವ ಮತ್ತು 538ನೇ ಕನಕದಾಸರ ಜಯಂತ್ಯುತ್ಸವದಲ್ಲಿ ಮಾತನಾಡಿದ ಅವರು, ಕನಕದಾಸರು ಕೀರ್ತನೆಗಳನ್ನು ಸರಳ ಭಾಷೆಯಲ್ಲಿ ರಚಿಸಿ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಮಾಡಿದ್ದಾರೆ. ತಮ್ಮ ಕೀರ್ತನೆಗಳು ಕೇವಲ ಭಕ್ತಿಯ ದೇವರ ನಾಮಗಳು ಮಾತ್ರವಲ್ಲ ಸಾಮಾಜಿಕ ವಿಮರ್ಶೆ, ತಾತ್ವಿಕತೆಯೊಂದಿಗೆ ಅಸಮಾನತೆ ಮತ್ತು ಜಾತಿ ವ್ಯವಸ್ಥೆ ವಿರುದ್ಧ ಬಲವಾದ ಧ್ವನಿಯೆತ್ತುವ ಮೂಲಕ ಜಾಗೃತಿ ಮೂಡಿಸಿದ್ದಾರೆಂದರು.

ವಿದ್ಯಾವನ ಕಾಲೇಜಿನ ಸಂಸ್ಥಾಪಕರಾದ ಸುಜಾತ ಮಾತನಾಡಿ, ಜನರು ವಿವಿಧ ಪ್ರಾಂತ್ಯಗಳಲ್ಲಿ ಹಂಚಿಹೋಗಿದ್ದ ಪ್ರದೇಶಗಳನ್ನು ಒಟ್ಟುಗೂಡಿಸಿ ಕರ್ನಾಟಕ ಎಂದು ನಾಮಕರಣ ಮಾಡಲಾಗಿದೆ. ಕನ್ನಡ ರಾಜ್ಯೋತ್ಸವ ಆಚರಿಸುತ್ತಿದ್ದು ಕನ್ನಡ ತಾಯಿ ವಿವಿಧ ದೇಶ ಮತ್ತು ವಿವಿಧ ರಾಜ್ಯಗಳಿಂದ ಬಂದವರಿಗೆ ಆಶ್ರಯ ನೀಡಿದ್ದು ಕನ್ನಡ ಭಾಷೆಯನ್ನು ಅವರಿಗೆ ಕಲಿಸುವುದಲ್ಲದೆ, ನಾವು ಕೂಡ ಬಳಸಬೇಕಿದೆ ಎಂದು ಸಲಹೆ ನೀಡಿದರು. ಉದ್ಯೋಗಕ್ಕಾಗಿ, ಹೊಟ್ಟೆಪಾಡಿಗಾಗಿ ನಾವು ಹತ್ತಾರು ಭಾಷೆಗಳನ್ನು ಕಲಿತರೂ ಕೂಡ ಕನ್ನಡ ಭಾಷೆಯನ್ನು ಬಳಸಬೇಕು ಹಾಗೂ ಇತರರಿಗೂ ಕಲಿಸಲು ಮುಂದಾಗಬೇಕೆಂದರು. ಈ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿವರ್ಗದವರು ಇದ್ದರು.

ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಗೆ ಚಾಲನೆ

ರಾಮನಗರ: ಶಾಲಾ ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೊಂದು ವೇದಿಕೆ ಒದಗಿಸುವಲ್ಲಿ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಪ್ರಮುಖ ಪಾತ್ರವಹಿಸಿದೆ ಎಂದು ಸುಗ್ಗನಹಳ್ಳಿಯ ಗ್ರಾಪಂ ಅಧ್ಯಕ್ಷೆ ಅರ್ಪಿತ ಹರೀಶ್‌ಕುಮಾರ್ ತಿಳಿಸಿದರು.

ತಾಲೂಕಿನ ಸುಗ್ಗನಹಳ್ಳಿ ಸರ್ಕಾರಿ ಪ್ರಾಥಮಿಕ ಪಾಠ ಶಾಲೆ ಆವರಣದಲ್ಲಿ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಕಾರ್ಯಕ್ರಮದ ಪ್ರಯೋಜನವನ್ನು ಎಲ್ಲರೂ ಪಡೆದುಕೊಳ್ಳಬೇಕು. ಮಕ್ಕಳು ಅತ್ಯಂತ ಉತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರುವುದು ಖುಷಿ ತಂದಿದೆ ಎಂದರು.

ಸಿ.ಆರ್.ಪಿ ರೇಣುಕಾ ಮಾತನಾಡಿ, 'ಮಕ್ಕಳ ಪ್ರತಿಭೆಯನ್ನು ಬೆಳಕಿಗೆ ತರುವಲ್ಲಿ ತಂದೆ, ತಾಯಿ ಮತ್ತು ಶಿಕ್ಷಕರ ಶ್ರಮವೂ ಇದೆ. ಇಬ್ಬರೂ ಕೈಜೋಡಿಸಿದಾಗ ಮಾತ್ರ ಮಕ್ಕಳ ಪ್ರತಿಭೆ ಅನಾವರಣಗೊಳ್ಳುತ್ತದೆ. ಮಕ್ಕಳ ಬೆಳವಣಿಗೆಯಲ್ಲಿ ಶಿಕ್ಷಕರಷ್ಟೇ ಪೋಷಕರ ಪಾತ್ರವೂ ಅತಿ ಮುಖ್ಯವಾಗಿದೆ. ಮಕ್ಕಳನ್ನು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳುವಂತೆ ಮಾಡಬೇಕೆಂದರು.

ಶಿಕ್ಷಕ ಕೆ.ಟಿ.ಶಿವಕುಮಾರ್, 'ಕ್ಲಸ್ಟರ್ ಮಟ್ಟದಲ್ಲಿ ವಿಜೇತರಾದವರು ತಾಲೂಕು ಮಟ್ಟದ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಅಲ್ಲಿ ಗೆದ್ದವರು ಜಿಲ್ಲಾ ಮತ್ತು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಜಿಲ್ಲೆಯನ್ನು ಪ್ರತಿನಿಧಿಸುವ ಅವಕಾಶ ಪಡೆಯುತ್ತಾರೆ. ಆದ್ದರಿಂದ ಯಾವುದೇ ಸ್ಪರ್ಧೆಗಳಲ್ಲಿ ಮಕ್ಕಳ ಪ್ರತಿಭೆಯನ್ನು ನಿಷ್ಪಕ್ಷಪಾತವಾಗಿ ಗುರುತಿಸಿ, ಪ್ರಶಸ್ತಿಯನ್ನು ತೀರ್ಮಾನಿಸಲಾಗುತ್ತದೆ' ಎಂದರು.

ಗ್ರಾಪಂ ಉಪಾಧ್ಯಕ್ಷ ಗೋವಿಂದರಾಜ್, ಮುಖಂಡ ಚಿಕ್ಕಸ್ವಾಮಿ, ಎಸ್‌ಡಿಎಂಸಿ ಅಧ್ಯಕ್ಷ ಗಂಗಾಧರ್, ದಾನಿಗಳಾದ ಮತ್ತಿತರರಿದ್ದರು.

ANAND RATHI
ಆನಂದ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್, ಎಕ್ಸ್‌ಪ್ರೆಸ್ ಜೋನ್, ಎ ವಿಂಗ್, 8ನೇ ಮಹಡಿ, ವೆಸ್ಟರ್ನ್ ಎಕ್ಸ್‌ಪ್ರೆಸ್ ಹೈವೇ, ಗೋರೆಗಾಂವ್ (ಪೂ), ಮುಂಬೈ – 400 063, ಭಾರತ.
ಮೊಬೈಲ್ : +91 8433508283। ವೆಬ್‌ಸೈಟ್ : www.rathi.com

ಇ-ಹರಾಜು ಮಾರಾಟ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕೆಳಗಿನ ಸಾಲಗಾರ / ಸಹ ಸಾಲಗಾರ / ಜಾಮೀನುದಾರರಿಗೆ ಸೂಚನೆ ನೀಡುವುದೇನೆಂದರೆ ಈ ಕೆಳಗೆ ವಿವರಿಸಿದ ಷೆಡ್ಯೂಲ್ ಸ್ಥಿರಾಸ್ತಿಯನ್ನು ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್ (ARGFL) (ಭದ್ರತಾ ಸಾಲದಾತ) ಇವರ ಸಾಲದ ಖಾತೆ ಸಂ. APPL00013959 ಇದರ ರಚನಾತ್ಮಕ ಸ್ವಾಧೀನವನ್ನು ARGFLನ ಅಧಿಕೃತ ಅಧಿಕಾರಿಯನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆ. ಸ್ವಾಧೀನ ಪಡೆದ ಆಸ್ತಿಯನ್ನು ಆನ್‌ಲೈನ್ ಇ-ಹರಾಜಿನ ವೆಬ್‌ಸೈಟ್ : ಮೂಲಕ https://sarfaesi.auctiontiger.net ನಿರ್ದಿಷ್ಟವಾಗಿ ಈ ಕೆಳಗಿನ ಷೆಡ್ಯೂಲ್‌ನಲ್ಲಿ ಉಲ್ಲೇಖಿಸಲಾದ ದಿನಾಂಕದಂದು, "ಎಲ್ಲಿದೆಯೋ ಹಾಗೆ" "ಹೇಗಿದೆಯೋ ಹಾಗೆ" & "ಏನಿದೆಯೋ ಹಾಗೆ" ಆಧಾರದ ಮೇಲೆ ಷೆಡ್ಯೂಲ್‌ನಲ್ಲಿ ನಿರ್ದಿಷ್ಟವಾಗಿ ನಮೂದಿಸಲಾದ ಒಟ್ಟು ಮೊತ್ತದ ವಸೂಲಾತಿ ಮತ್ತು ಅದರ ಮೇಲಿನ ಒಪ್ಪಂದದ ಬಡ್ಡಿ ಮತ್ತು ಇತರ ವೆಚ್ಚಗಳು ಮತ್ತು ಶುಲ್ಕಗಳು ಕೆಳಗೆ ತಿಳಿಸಿದಂತೆ ಸಾಲಗಾರ / ಸಹ-ಸಾಲಗಾರ / ರು / ಜಾಮೀನುದಾರರಿಂದ ಪಾವತಿಯಾಗುವವರೆಗೆ ದಿನಾಂಕದವರೆಗೆ ವಸೂಲಿಗಾಗಿ ಮಾರಾಟ ಮಾಡಲಾಗುವುದು.

ಸಾಲಗಾರರ ಹೆಸರು : (1) ಕು. ನಿಕ್ಷಿತಾ ಹೆಚ್.ಆರ್. (ಸಾಲಗಾರರು) ನೆಲಮಹಡಿ, ಜೆ2, ಜೆ.ಸಿ. ಸಫೈರ್ ಅಪಾರ್ಟ್‌ಮೆಂಟ್, ಅನ್ನಪೂರ್ಣೇಶ್ವರಿ ನಗರ, ಜಯಲಕ್ಷ್ಮಮ್ಮ ಲೇಔಟ್, ನಾಗರಭಾವಿ 2ನೇ ಸ್ಟೇಜ್, ಬೆಂಗಳೂರು – 560072.

ಸಹ ಸಾಲಗಾರ/ರು ಹೆಸರು : (2) ಕು. ಶೈಲಜಾ ಸಿ.ಎನ್. (ಸಹ-ಸಾಲಗಾರರು) ನೆಲಮಹಡಿ, ಜೆ2, ಜೆ.ಸಿ. ಸಫೈರ್ ಅಪಾರ್ಟ್‌ಮೆಂಟ್, ಅನ್ನಪೂರ್ಣೇಶ್ವರಿ ನಗರ, ಜಯಲಕ್ಷ್ಮಮ್ಮ ಲೇಔಟ್, ನಾಗರಭಾವಿ 2ನೇ ಸ್ಟೇಜ್, ಬೆಂಗಳೂರು – 560072. (3) ಶ್ರೀ ಸಿ.ಜಿ. ಸಿದ್ದಲಿಂಗಪ್ಪ (ಸಹ-ಸಾಲಗಾರರು) ನೆಲಮಹಡಿ, ಜೆ2, ಜೆ.ಸಿ. ಸಫೈರ್ ಅಪಾರ್ಟ್‌ಮೆಂಟ್, ಅನ್ನಪೂರ್ಣೇಶ್ವರಿ ನಗರ, ಜಯಲಕ್ಷ್ಮಮ್ಮ ಲೇಔಟ್, ನಾಗರಭಾವಿ 2ನೇ ಸ್ಟೇಜ್, ಬೆಂಗಳೂರು – 560072. (4) ಶ್ರೀ ಉಮೇಶ್ ಗೌಡ, (ಸಹ-ಸಾಲಗಾರರು) ನೆಲಮಹಡಿ, ಜೆ2, ಜೆ.ಸಿ. ಸಫೈರ್ ಅಪಾರ್ಟ್‌ಮೆಂಟ್, ಅನ್ನಪೂರ್ಣೇಶ್ವರಿ ನಗರ, ಜಯಲಕ್ಷ್ಮಮ್ಮ ಲೇಔಟ್, ನಾಗರಭಾವಿ 2ನೇ ಸ್ಟೇಜ್, ಬೆಂಗಳೂರು – 560072.

ಸ್ಥಿರಾಸ್ತಿಯ ವಿಳಾಸ : ಆಸ್ತಿ ನಂ. 111, ಖಾತೆ ನಂ. 248, ಅಸೆಸ್‌ಮೆಂಟ್ ನಂ. 32/1, ಬಿಬಿಎಂಪಿ ವಾರ್ಡ್ ನಂ. 40, ಸಾಯಿಬಾಬ ಲೇಔಟ್, ಅನುಪಮ ಸ್ಕೂಲ್ ಹತ್ತಿರ, ಅಂಧ್ರಹಳ್ಳಿ ಗ್ರಾಮ, ಯಶವಂತಪುರ ಹೋಬಳಿ, ಬೆಂಗಳೂರು, ಉತ್ತರ ತಾಲ್ಲೂಕು, ಬೆಂಗಳೂರು. ಚೆಕ್ಕುಬಂಧಿ :- ಉತ್ತರಕ್ಕೆ : ರಸ್ತೆ, ಪೂರ್ವಕ್ಕೆ : ಸೈಟ್ ನಂ. 110, ಪಶ್ಚಿಮಕ್ಕೆ : ಸೈಟ್ ನಂ. 112, ದಕ್ಷಿಣಕ್ಕೆ : ಖಾಸಗಿ ಆಸ್ತಿ.

ಬಾಕಿ ಮೊತ್ತ (ತಗಾದೆ ಸೂಚನೆಯ ಪ್ರಕಾರ ಭವಿಷ್ಯದ ಬಡ್ಡಿ ಮತ್ತು ವೆಚ್ಚದೊಂದಿಗೆ)	ರೂ. 53,86,148/-(ರೂಪಾಯಿ ಐವತ್ತಮೂರು ಲಕ್ಷ ಎಂಭತ್ತಾರು ಸಾವಿರ ಒಂದು ನೂರ ನಲವತ್ತೆಂಟು ಮಾತ್ರ)
ಹರಾಜಿನ ದಿನಾಂಕ	15ನೇ ಡಿಸೆಂಬರ್, 2025
ಮೀಸಲು ಬೆಲೆ	ರೂ. 1,36,08,000/-(ರೂಪಾಯಿ ಒಂದು ಕೋಟಿ ಮೂವತ್ತಾರು ಲಕ್ಷ ಎಂಟು ಸಾವಿರ ಮಾತ್ರ)
ಮುಂಗಡ ಹಣ ಠೇವಣಿ	ಮೀಸಲು ಬೆಲೆಯ ಶೇ. 10% ರಷ್ಟು
ಕನಿಷ್ಠ ಬಿಡ್ ಹೆಚ್ಚಳ ಮೊತ್ತ	ರೂ. 10,000/-(ರೂಪಾಯಿ ಹತ್ತು ಸಾವಿರ ಮಾತ್ರ)
ಉದ್ದೇಶಿತ ಖರೀದಿದಾರರಿಗೆ ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	8ನೇ ಡಿಸೆಂಬರ್, 2025 ಬೆಳಗ್ಗೆ 10.00 ರಿಂದ ಸಂಜೆ 4.00 ರವರೆಗೆ
ಕೆವೈಸಿ. ದಾಖಲೆಗಳು / ಇ.ಎಂ.ಡಿ.ಯ ಪುರಾವೆ ಇತ್ಯಾದಿಗಳೊಂದಿಗೆ ಟೆಂಡರ್ ಫಾರಂ ಅನ್ನು ಸಲ್ಲಿಸಲು ದಿನಾಂಕ ಮತ್ತು ಸಮಯ	11ನೇ ಡಿಸೆಂಬರ್, 2025 ಸಂಜೆ 4.00 ರವರೆಗೆ ಕೆ.ವೈ.ಸಿ. ದಾಖಲೆಗಳೊಂದಿಗೆ
ಆನ್‌ಲೈನ್ ಆಫರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	15ನೇ ಡಿಸೆಂಬರ್, 2025, ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ರ ನಡುವೆ

ಗಮನಿಸಿ : ಹರಾಜು ಪ್ರಕ್ರಿಯೆಗಳ ಬಗ್ಗೆ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ ಉದ್ದೇಶಿಸಿರುವ ಬಿಡ್ಡುದಾರರು / ಖರೀದಿದಾರರು ಆನಂದ್ ರಾಠಿ ಗ್ರೂಪ್ ವೆಬ್‌ಸೈಟ್ : www.rathi.com ಗೆ ಭೇಟಿ ನೀಡಬಹುದು.

ಈ ಪ್ರಕಟಣೆಯು ಮೇಲಿನ ಸಾಲಗಾರರು / ಸಹ ಸಾಲಗಾರರು / ಜಾಮೀನುದಾರರು ಅವರಿಗೆ ನಿಯಮ 9(1) ಅಥವಾ ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ಅಡಿಯಲ್ಲಿ 30 ದಿನಗಳ ನೀಡಿರುವ ಸೂಚನೆಯಾಗಿದೆ.

ದಿನಾಂಕ : 7ನೇ ನವೆಂಬರ್, 2025
ಸ್ಥಳ : ಮುಂಬೈ
ಸಹಿ/- ಆನಂದ್ ರಾಠಿ ಗ್ಲೋಬಲ್ ಫೈನಾನ್ಸ್ ಲಿಮಿಟೆಡ್ ಅಧಿಕೃತ ಅಧಿಕಾರಿ

BEFORE THE HON'BLE I ADDL DISTRICT CONSUMERS DISPUTES REDRESSAL COMMISSION AT BANGALORE
Consumer Complaint No.23 of 2025

BETWEEN : SMT. RATHNAMMA, W/o. late V. Narayanappa, Aged about 74 years, R/at. No.57! Srirama Nilaya, Basavanna Street, New Pet Anekal - 562106 ..... Complainant

AND : M/S AMR HOUSING DEVELOPMENT CORPORATION, A Partnership Firm, Office at No.305/66, 2nd floor, Above SBM Bank, 2nd main road, 40th Cross, Jayanagar 8th Block, Bengaluru 560070, Represented by its Partner Mr.Manjunatha Reddy.

2. SRI. D. VENKATESH, S/o. late Dyapaiah, Aged about 59 years,

3. SRI. MANJUNATH, S/o. Nanjappa, Aged about 38 years, Both residing at Iggaluru Village, Chandapura Post, Attibele Hobli, Anekal Taluk, Bengaluru 560099. .....Opposite Parties

NOTICE TO APPEAR

The above-named complainant has filed above the complaint against the opposite parties alleging deficiency in service and for refund of the advance amount paid for registration of the flat bearing No.408, situated at Fourth Floor of Bloack-B, measuring 937 Sq.Ft., of super built-up area, to be constructed over residentially converted land bearing Sy. No.129/1, situated at Iggaluru Village, Attibele Hobli, Anekal Taluk, Bengaluru Urban District, measuring to an extent of 1 acre 05.08 guntas in respect of the Agreement to Sell dated 28.09.2013. In this regard you may appear before this Hon'ble Court on 10-12-2025 at 11.00 A.M either in person are or through an advocate failing which the suit will be heard and determined without any objections.

Given under my hand the seal of the Court, this 30th day of October 2025.

By Order of the Court, Asst Registrar-Cum-Assistant Administrative Officer Bengaluru Rural & Bengaluru Urban Ist ADDL District Consumer DisputesRedressal Commission

ADDRESS OF THE COMPLAINANT ADVOCATE
V.R.BALARAJ, ADVOCATE,
No.17-A, 1 floor, HSS and HMS Complex,
Near Ulsoor gate police station,
Cubbonpet main road, Benglauru 560002.

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ
ಕರ್ಮವೀರ
ಎಲ್ಲ ಬುಕ್‌ಸ್ಟಾಲ್‌ಗಳಲ್ಲಿ ಲಭ್ಯ

ಹೊಸಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಹೊನ್ನಮ್ಮ ಚಿಕ್ಕಪಾಪಯ್ಯ ಆಯ್ಕೆ

ಸಂ.ಕ.ಸಮಾಚಾರ, ದೊಡ್ಡಬಳ್ಳಾಪುರ

ಹೊಸಹಳ್ಳಿ ಗ್ರಾಪಂನ ನೂತನ ಅಧ್ಯಕ್ಷರಾಗಿ ಹೊನ್ನಮ್ಮ ಚಿಕ್ಕಪಾಪಯ್ಯ ಆಯ್ಕೆಯಾಗಿದ್ದಾರೆ.

ನಾಗರತ್ನಮ್ಮ ಲಕ್ಷ್ಮೀನಾರಾಯಣಪ್ಪ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಕೃಷಿ ಇಲಾಖೆಯ ರಾಘವೇಂದ್ರ ನೇತೃತ್ವದಲ್ಲಿ ಚುನಾವಣೆ ನಡೆದು ಹೊನ್ನಮ್ಮ ಚಿಕ್ಕಪಾಪಯ್ಯ ಆಯ್ಕೆಯಾಗಿದ್ದಾರೆ.

ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿ ಹೊನ್ನಮ್ಮ ಚಿಕ್ಕಪಾಪಯ್ಯ ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ನಾಗವೇಣಿ ನರಸಿಂಹಮೂರ್ತಿ ನಾಮಪತ್ರ ಸಲ್ಲಿಸಿದ್ದರು. ಚುನಾವಣೆಯಲ್ಲಿ ಓರ್ವ ಸದಸ್ಯ ಗೈರು ಹಾಜರಾಗಿದ್ದು 23 ಸದಸ್ಯರು ಮತದಾನ ಮಾಡಿದ್ದಾರೆ. ಬಳಿಕ ನಡೆದ ಮತ ಎಣಿಕೆ ಕಾರ್ಯದಲ್ಲಿ ಕಾಂಗ್ರೆಸ್ ಬೆಂಬಲಿತ ನಾಗವೇಣಿ ನರಸಿಂಹಮೂರ್ತಿ 8 ಮತಗಳನ್ನು ಪಡೆದರೆ, ಬಿಜೆಪಿ ಬೆಂಬಲಿತ ಹೊನ್ನಮ್ಮ ಚಿಕ್ಕಪಾಪಯ್ಯ 15 ಮತಗಳನ್ನು ಪಡೆಯುವ ಮೂಲಕ 7 ಮತಗಳ ಅಂತರದಿಂದ ಜಯಗೊಳಿಸಿದ್ದಾರೆ.

ಹೊಸಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಹೊನ್ನಮ್ಮ ಚಿಕ್ಕಪಾಪಯ್ಯ ಆಯ್ಕೆಯಾಗುತ್ತಿದ್ದಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಪರಸ್ಪರ ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು. ನೂತನ ಅಧ್ಯಕ್ಷರಾದ ಹೊನ್ನಮ್ಮ ಚಿಕ್ಕಪಾಪಯ್ಯ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಎಚ್.ಎಸ್.ಅಶ್ವತ್ಥನಾರಾಯಣ ಕುಮಾರ್, ಮುಖಂಡರಾದ ಲಕ್ಷ್ಮೀನಾರಾಯಣಪ್ಪ, ತಿಮ್ಮೇಗೌಡ, ಪ್ರಕಾಶ್‌ರೆಡ್ಡಿ, ಮಂಜುನಾಥ್, ರಂಗಾಚಾರಿ, ಪ್ರಭು, ಅಶ್ವತ್ಥ್‌ನಾರಾಯಣ ಸೇರಿದಂತೆ ಬಿಜೆಪಿ ಬೆಂಬಲಿತ ಸದಸ್ಯರು ಅಭಿನಂದನೆ ಸಲ್ಲಿಸಿದರು.

ಕನಕದಾಸರದ್ದು ಭಕ್ತಿ ಮೀರಿದ ಬಂಡಾಯ: ಬಿ.ಎನ್.ಗಿರೀಶ್

ಸಂ.ಕ.ಸಮಾಚಾರ, ಚನ್ನಪಟ್ಟಣ

ಸಮಾಜಕ್ಕೆ ದಾರಿದೀಪವಾಗಿರುವ ದಾಸಶ್ರೇಷ್ಠ ಕನಕದಾಸರಲ್ಲಿ ಭಕ್ತಿಯಷ್ಟೇ ಬಂಡಾಯವೂ ಇತ್ತು. ಉಡುಪಿ ಕೃಷ್ಣನ ದರ್ಶನಕ್ಕೆ ಅವಕಾಶ ನೀಡದಿದ್ದಾಗ, ಕೃಷ್ಣನೇ ಅವರತ್ತ ತಿರುಗಿದ. ಇದು ಅವರಲ್ಲಿದ್ದ ಭಕ್ತಿ ಮತ್ತು ಬಂಡಾಯಕ್ಕೆ ಸಾಕ್ಷಿ ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ ತಿಳಿಸಿದರು.

ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಲಾದ ಭಕ್ತ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಕನಕದಾಸರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ವರ್ಣ ವ್ಯವಸ್ಥೆ, ಜಾತಿ ವ್ಯವಸ್ಥೆ ಹಾಗೂ ಮನುಷ್ಯ ವಿರೋಧಿ ಕಟ್ಟುಪಾಡುಗಳ ವಿರುದ್ಧ ಸಮಾಜವನ್ನು ಕನಕದಾಸರು ಎಚ್ಚರಿಸಿದರು ಎಂದರು.

ಜಾತಿ ಮತ ತಾರತಮ್ಯವಿಲ್ಲದೆ ನಾವೆಲ್ಲರೂ ಒಂದೇ ಎಂಬ ಸಂದೇಶವನ್ನು ಕನಕದಾಸರು ತಮ್ಮ ಕೀರ್ತನೆಗಳ ಮೂಲಕ ಸಮಾಜಕ್ಕೆ ಸಾರಿದರು. ಅವರು ಕೇವಲ ಕವಿಯಲ್ಲ, ಭಕ್ತ, ದಾರ್ಶನಿಕ, ಸಮಾಜಸುಧಾರಕ ಹಾಗೂ ಮೌಲ್ಯಗಳ ಜೀವಂತ ರೂಪವಾಗಿದ್ದರು ಅಸಮಾನತೆಗಳ ವಿರುದ್ಧ ಹೋರಾಡಿ, ಸಮಾನತೆ ಮತ್ತು ಸಹೋದರತ್ವದ ಸಮಾಜ ನಿರ್ಮಾಣದ ಕನಸು ಕಂಡರು ಎಂದು ಹೇಳಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ರಾಮಲಿಂಗಯ್ಯ, ನಗರಸಭೆ ಆಯುಕ್ತ ಮಹೇಂದ್ರ, ತಾಲೂಕು ಭೂದಾಖಲೆ ಸಹಾಯಕ ನಿರ್ದೇಶಕ ಪ್ರಖ್ಯಾತ್, ನಗರಸಭಾ ಸದಸ್ಯರಾದ ರೇವಣ್ಣ, ಮಂಜುನಾಥ್, ವಿವೇಕ್ ವೆಂಕಟೇಶ್, ಮಾಜಿ ಸದಸ್ಯ ಮಂಜುನಾಥ್, ಜಿಪಂ ಮಾಜಿ ಸದಸ್ಯ ಕೃಷ್ಣಪ್ಪ ಮತ್ತಿತರರಿದ್ದರು.